Regd NoB G. 182

July 1969 ಜುಲೈ

ಗೋ ಮಾತಾಕೀ ಜೈ

ಭಾರತವ ಅವ್ಯಂತ ಗೋವಧೆಯು
ಶಾಸನಬದ್ಧವಾಗಿ
ನಿರೋಧವಾಗಲಿ

Cow Slaughter should be
banned immediately

19 ನೇ ವರ್ಷ

ಗೋರಕ್ಷಣ
GORAKSHANA

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

Please help in every way
This Humanitarian Propaganda Paper
★
ಗೋರಕ್ಷಣ, ಅಹಿಂಸಾ
ಪ್ರಚಾರಪತ್ರಿಕೆ
ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ
ಬಿಡಿ ಪ್ರತಿ 2 ಪೈಸೆ

Cow Slaughter should be banned Immediately

ಗಾಂಧಿ ಶತಾಬ್ದಿಯ ಈ ಸಂದರ್ಭದಲ್ಲಿ ಗೋವಧೆ ನಿಷೇಧವಾಗಲಿ

'COW'

All life is sacred But most sacred is the cow The same power of God which appears in our mother's breast also appears as milk in the cow's udder to nourish us. It is obviously the will of God that we should serue the cow which gives life blood for our sustenence The bullock is also very useful for ploughihg the field and growing corn. It would be height of ingratitude to kill the cow or its male child. The milk of the cow is the ideal food for man. The clarified butter is also a most cherished offerings to Gods.

The cow dung and the uriee of the cow are effective antiseptics and valuable manure. After its death the skin and the bone are highly valuable commodities. Every product of the cow is of great value to man. It seems as if in the cow God had made the ideal animal for the good of man It is surely a revolt against the laws of God to kill the cow for its meat. The Vedas have used the term **aghnya** (not to be killed) with reference to the cow, times without number.

'ಗೋಕರ್ಣ-ಭೂಮಿ'

(ತೀರ್ಥವಿವರಣೆ)

[ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು]

ಪರರಿಗೆ ತನ್ನಲ್ಲಿದ್ದ ವಸ್ತುಗಳನ್ನು ಉದಾತ್ತನಾಗಿ ನೀಡುವುದೆ ದಾನ, ಅದರ ಫಲವೆಂದರೆ ಸ್ವಹಿತಾರ್ಜನವೆನ್ನಲಡ್ಡಿಯಿಲ್ಲ. 'ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ಎಂಬ ಸೂಕ್ತಿಯಿದೆ! ಮಹಾದಾನಗಳಲ್ಲಿ ಭೂಮಿದಾನವೂ ಒಂದಾಗಿದೆ. ಭೂಮಿಯ ದಾನಕ್ಕೆ ಪ್ರಾಚೀನರು ಬಳಸುತ್ತಿದ್ದ ಅಳತೆಯೊಂದಕ್ಕೆ 'ಗೋಕರ್ಣ" ವೆಂದು ಹೆಸರು ಹೇಳಲಾಗಿದೆ. 'ಗೋವಿನ ಕರ್ಣದಷ್ಟು ಉದ್ದಗಲ" ಕ್ಕೆ "ಗೋಕರ್ಣ" ವೆನ್ನುವುದಲ್ಲ, 'ಗೋಕರ್ಣ' ಕ್ಷೇತ್ರದಲ್ಲಿ ಭೂಮಿದಾನವೆಂದೂ ಹೇಳುವುದಲ್ಲ. 'ಗೋಕರ್ಣ" ವೆಂಬ ಅಳತೆಯ ವಿಚಾರ ಹೀಗೆನ್ನಲಾಗಿದೆ. (ಅಶ್ವಮೇಧ ಪರ್ವದ ಉಪಪರ್ವ ವೈಷ್ಣವಧರ್ಮಪರ್ವ 2-25): ಎಲ್ಲೆಡೆಗೆ ಮೂವತ್ತು ದಂಡಗಳಷ್ಟು ಅಳತೆಯಿರಬೇಕು (ಪೂರ್ವಪಶ್ಚಿಮ ದಕ್ಷಿಣೋತ್ತರ ದಿಕ್ಕುಗಳಲ್ಲಿ 20 ದಂಡವಿರಬೇಕು). ನೂರು ಗೋವುಗಳು ಹೋರಿ, ಕರುಗಳೊಡನೆ ಸ್ವೇಚ್ಛೆಯಾಗಿ ನಿಲ್ಲುವಷ್ಟು ಪ್ರದೇಶಕ್ಕೂ "ಗೋಕರ್ಣ" ವೆಂದು ಹೆಸರು. ಇಲ್ಲಿ ನೂರು ಗೋವುಗಳು "ಅಯಂತ್ರಿತ" ವಾಗಿರುವಷ್ಟು ನೆಲಕ್ಕೆ "ಗೋಕರ್ಣ" ವೆಂಬ ಹೆಸರನ್ನೂ ಕಾಣುವಾಗ, ಅಳತೆಯ ವಿಚಾರಕ್ಕೆ ಕೇವಲ ದಂಡಾವಿಗಳು ಮಾತ್ರವಲ್ಲ, ಗೋವಿನ ನಿಲುಗಡೆಯೂ ಅದೊಂದು ಪ್ರಮಾಣ (ಅಳತೆ) ಆಗುತ್ತಿರುವುದೇ ವೈಶಿಷ್ಟ್ಯವಾಗಿದೆ! (ನೂರು ಗೋವು ಹಾಗೂ ನೂರು ಹೋರಿ ಮತ್ತು ನೂರು ಕರುಗಳೆಂದು ಇಲ್ಲಿ ಅರ್ಥ ಬರುತ್ತದೆ!) ಈ ಬಗೆಯ ವಿಶೇಷಾರ್ಥವನ್ನು ಬಲ್ಲವರು ವಿವರಿಸಬೇಕು. 'ಒಂದು ಅಳಿತ್ತರ' ಎಂಬಂತೆ, 'ಒಂದು ಗೋವಿನ ನಿಲುವು" ಇಲ್ಲಿ ಉಲ್ಲೇಖಿಸಿದ್ದು ಇಲ್ಲಿ ಗಮನೀಯವೆನಿಸಿದೆ!

ಕಾರ್ಲ್ ಹೇಗ್ ಬೆಕ್ ಮೃಗಪಕ್ಷಿಶಾಲಾ

(ಮುಂದುವರಿದುದು)

ಆಲಾಸ್ಕಾ ದ್ವೀಪದ ಕರಡಿಗಳನ್ನೂ, ಜಪಾನಿನಿಂದ ಫ್ಲೆಮಿಂಗೋ ಪಕ್ಷಿಗಳನ್ನೂ ದಕ್ಷಿಣ ಆಫ್ರಿಕಾದ ದಟ್ಟವಾದ ಕಾಡುಗಳಿಂದ ವನ್ಯಜಂತುಗಳನ್ನೂ, ಉಷ್ಣವಲಯದಲ್ಲಿ ದೊರಕುವ ಹೆಬ್ಬಾವುಗಳನ್ನೂ ಇನ್ನೂ ಅನೇಕ ತರಹೆಯ ಅತಿಶಯ ಪ್ರಾಣಿಗಳನ್ನೂ ಇಲ್ಲಿಗೆ ತಂದು ಸೇರಿಸಲಾಗಿದೆ. ಆ ಪ್ರಾಣಿಗಳು ಯಾವಯಾವ ತರಹೆಯ ವಾತಾವರಣದಲ್ಲಿ ವಾಸಿಸುತ್ತಿದ್ದವೋ ಅಂತಹುದೇ ವಾತಾವರಣವನ್ನು ಈ ಮೃಗಶಾಲೆಯಲ್ಲಿಯೂ ಸೃಷ್ಟಿಸಲಾಗಿದೆ.

ಭಾರತದ ಕಾಂಕಾರದಲ್ಲಿ ಹಿಡಿಯಲ್ಪಟ್ಟು ಇಲ್ಲಿಗೆ ಕರತರಲಾಗಿರುವ ಖಡ್ಗಮೃಗವೊಂದರ ಬೆಲೆಯೇ 64000 ಜರ್ಮನ್ ಮಾರ್ಕ್‌ಗಳೆಂದು ತಿಳಿಯಬಂದಿದೆ. ಸಂಕ್ಷೇಪವಾಗಿ ಮುಗಿಸಬೇಕೆಂದರೆ, ಸಕಲ ಜಾತಿಯ ಪ್ರಾಣಿಗಳನ್ನೂ ಪಕ್ಷಿಗಳನ್ನೂ ಇಲ್ಲಿ ಕಂಡು ಆನಂದಿಸಬಹುದಾಗಿದೆ.

ಈ ಪ್ರಾಣಿಸಂಗ್ರಹಾಲಯವನ್ನು ಸ್ಥಾಪಿಸಿದ ಕಾರ್ಲ್ ಹೆಗ್ ಬೆಕ್ ಎನ್ನುವರು 1844 ರಲ್ಲಿ ಹ್ಯಾಂಬರ್ಗಿನಲ್ಲಿ ಜನ್ಮತಾಳಿದರು. ಇವರಿಗೆ ಮೊದಲಿನಿಂದಲೂ ಪ್ರಾಣಿಗಳ ಮೇಲೆ ವಿಶೇಷ ಆಕ್ಕರೆಇದ್ದು ಆರಂಭದಲ್ಲಿ ಇವರು ಸೀಲ್ ಪ್ರಾಣಿಗಳನ್ನು ಮಾರುವ ಅಂಗಡಿಯಲ್ಲಿ ಕೆಲಸಕ್ಕಿದ್ದು, ನಂತರ ಸರ್ಕಸ್ ಕಂಪೆನಿಯೊಂದನ್ನು ತೆರೆದರು. ಕೊನೆಗೆ ಕ್ರಿ ಶ 1907 ರಲ್ಲಿ ಇವರು ಹ್ಯಾಂಬರ್ಗಿನಲ್ಲಿ ಸ್ಟೆಲಿಂಜರ್ ಪ್ರಾಣಿಸಂಗ್ರಹಾಲಯವನ್ನು ತೆರೆದರು. ಅದೇ ಇಂದು ವಿಶ್ವಕೋಮುಖವಾಗಿ ಅಭಿವೃದ್ಧಿ ಹೊಂದಿ ಹೇಗ್ ಬೆಕ್ ಪ್ರಾಣಿಸಂಗ್ರಹಾಲಯವೆಂದು ಜಗದ್ವಿಖ್ಯಾತವಾಗಿದೆ.

ಮಡಕೇರಿ— ಕೊಡಗಿನಲ್ಲಿ 68-69 ರಲ್ಲಿ 3 ಲಕ್ಷ ಕಿಲೋ ಜೇನುತುಪ್ಪ ಉತ್ಪಾದಿತವಾಯಿತು.

ರಾಷ್ಟ್ರಪ್ರಾಣಿ

ನವದೆಹಲಿ— ಭಾರತದ ರಾಷ್ಟ್ರಪ್ರಾಣಿ ಬಗ್ಗೆ ವಿವಿಧ ರಾಜ್ಯಗಳು ವಿವಿಧ ರೀತಿಯಲ್ಲಿ ಸಿಂಹ, ಆನೆ, ಹುಲಿ, ಜಿಂಕೆ, ಕೆಂಡಾಮೃಗ ಆಯ್ಕೆಮಾಡಿದ್ದವು. ವನ್ಯಜೀವಿ ಸಮಿತಿಯು ಸಿಂಹವನ್ನು ರಾಷ್ಟ್ರಪ್ರಾಣಿಯಾಗಿ ಆರಿಸಿದೆ.

★

ಮೊದಲು ದನ ಸಾಕಿದ್ದು

ಏಷ್ಯಾದಲ್ಲಿ ಪ್ರಥಮತಃ ಮನೆಯಲ್ಲಿ ದನಸಾಕಿದ್ದು ಕ್ರಿ ಪೂ 5800 ರಲ್ಲಿ ಮತ್ತು ಟರ್ಕಿಯಲ್ಲಿ, ಎನ್ನುವದು ಅಲ್ಲಿ ಸಿಕ್ಕಿದ ಮೂಳೆಯಿಂದ ಎಂದು ವ್ಯಕ್ತಪಟ್ಟಿರುವದೆಂದು ಹೇಳಲಾಗಿದೆ.

★

ರಾಜಸೂಯ ಯಾಗ

ಹೈದರಾಬಾದು— ಹರಿಹರದ ಶ್ರೀ ಸಮರ್ಥ ನಾರಾಯಣ ಮಹಾರಾಜ್‌ರವರು ಇಲ್ಲಿ ರಾಜಸೂಯ ಯಾಗವನ್ನು ಪ್ರಾರಂಭಿಸಿರುವರು.

★

ಮರಣದಂಡನೆ ರದ್ದಿಗೆ

ನವದೆಹಲಿ— ಗಾಂಧಿ ಶತಮಾನೋತ್ಸವದ ಈ ವರ್ಷ ಮರಣದಂಡನೆ ರದ್ದುಗೊಳಿಸುವ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಲಾಯಿತು.

●

ಲಂಡನ್ನಿನಲ್ಲಿ ಜಗನ್ನಾಥ ರಥೋತ್ಸವ

ಲಂಡನ್— ಪ್ರಪ್ರಥಮ ಬಾರಿಯಾಗಿ ಇಲ್ಲಿ 30 ಅಡಿ ಎತ್ತರದ ರಥದಲ್ಲಿ ಕೃಷ್ಣ, ಬಲರಾಮ, ಸುಭದ್ರೆ ಮೂರ್ತಿಗಳ ರಥೋತ್ಸವ ನಡೆಯಿತು: ಕೃಷ್ಣಭಕ್ತ ಕೇಂದ್ರ ಎಂದು ಅಮೇರಿಕ ಹಿಂದೂ ಸಂಸ್ಥೆ ಏರ್ಪಡಿಸಿತ್ತು; ಲಂಡನ್ನಿನಲ್ಲಿ ಅಪರೂಪವಾದ ಈ ಉತ್ಸವ ನೋಡಲು ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು.

ದೇವಾಲಯದಲ್ಲಿ ಪ್ರಾಣಿವಧೆ ನಿಷೇಧ

(ಮುಂದುವರಿದುದು)

ದೇವರಿಗೆ ಪ್ರಾಣಿಗಳನ್ನು ಅರ್ಪಿಸುವದನ್ನು ಸಸ್ಯಾಹಾರಿಗಳು ವಿರೋಧಿಸಿದರೂ ಹೆಚ್ಚಿಗೆ ಮಾತಿನ ಪ್ರಚಾರ ಮಾಂಸಾಹಾರಿಗಳಿಂದಲೇ ಆಗುತ್ತಿದೆಯೆಂಬುದನ್ನು ನಾವು ಗಮನಿಸಿದ್ದೇವೆ. ಈ ಮಾಂಸಾಹಾರಿಗಳು ಮಾಂಸ ತಿನ್ನುವುದನ್ನು ಬೆಂಬಲಿಸುತ್ತಾರೆ. ಆದರೆ ದೇವರಿಗೆ ಸಮರ್ಪಿಸಿದ್ದು ಮಾತ್ರಾ ಇವರಿಗೆ ಆಗದು. ಇದಕ್ಕೆ ಸಮರ್ಪಕವಾದ ಉತ್ತರ ಗೀತೆಯಲ್ಲಿದೆ—

ಯತ್ಕರೋಷಿಯದಶ್ನಾಸಿಯಜ್ಜುಹೋಷಿದದಾಸಿಯತ್ ।
ಯತ್ತಪಸ್ಯಸಿಕೌಂತೇಯತತ್ಕುರುಷ್ವಮದರ್ಪಣಮ್ ॥

ಸರಮಾತ್ಮನು ಹೇಳಿದ್ದಾನೆ ' ನೀನು ಏನು ಮಾಡುತ್ತೀಯೋ, ಏನನ್ನು ತಿನ್ನುತ್ತೀಯೋ, ಯಾವುದನ್ನು ಹೋಮಮಾಡುತ್ತೀಯೋ, ಏನನ್ನು ದಾನಮಾಡುತ್ತೀಯೋ, ಅದನ್ನು ನನಗೆ ಸಮರ್ಪಿಸು '.

ಮಾನವರು ಹೆಚ್ಚುಹೆಚ್ಚಾಗಿ ಭಗವಂತನ ಕಡೆಗೆ ಸೇರಲು ಇರುವ ಮಾರ್ಗ ಇದು. ನೀವು ಮಾಂಸವನ್ನು ತಿಂದರೆ ಅದನ್ನು ಮೊದಲು ದೇವರಿಗೆ ಅರ್ಪಿಸಬೇಕು. ಪ್ರತಿಯೊಂದು ಕ್ರಿಯೆಯೂ ಕೂಡ ಭಗವದರ್ಪಣವಾಗಿ ಮಾಡಬೇಕು. ಅದರಿಂದಲೇ ಹಿಂದಿನ ಕಾಲದಲ್ಲಿ ದರೋಡೆಕಾರರು, ದರೋಡೆಗೆ ಹೊರಡುವ ಮುಂಚೆ ದೇವರಿಗೆ ನಮಸ್ಕಾರ ಮಾಡಿ ಹೋಗುತ್ತಿದ್ದರು.

ಆ ಮಾರ್ಗದಿಂದಲೇ ದರೋಡೆಕಾರನು ದೇವರ ಭಕ್ತನಾಗುತ್ತಿದ್ದನು. ಆ ರೀತಿ ಇಲ್ಲದಿದ್ದರೆ ಆಂಥವನು ಎಂದೂ ಭಕ್ತನಾಗಲು ಸಾಧ್ಯವಾಗುತ್ತಿರಲಿಲ್ಲ.

ಆಧುನಿಕರು ದೇವಿಯ ದೇವಾಲಯದಲ್ಲಿ ಪ್ರಾಣಿವಧೆಯೆಂದರೆ ಘಾಬರೀಬೀಳುತ್ತಾರೆ. ಅವರು ತಮ್ಮ ಆಹಾರಕ್ಕಾಗಿ ಪ್ರಾಣಿವಧೆ ನಡೆದರೆ ಅದಕಾಗಿ ಯೋಚಿಸುವುದಿಲ್ಲ. ಆದರೆ ದೇವಿಗೆ ಅರ್ಪಿಸುವದನ್ನು ಮಾತ್ರ ಬಲವಾಗಿ ವಿರೋಧಿಸುತ್ತಾರೆ.

ಶಾಸ್ತ್ರಗಳಿಗೆ ವಿಧೇಯನಾದ ಹಿಂದುವು ಮಾಂಸಾಹಾರಿಯಾಗಿದ್ದರೆ, ಅದು ದೇವರ ಪ್ರಸಾದವಾಗಬೇ ತೆಗೆದುಕೊಳ್ಳುವಂತಿಲ್ಲ. ಈ ಕ್ರಮವು ಮಾಂಸ ತಿನ್ನುವುದನ್ನು ಕ್ರಮೇಣ ಕಮ್ಮಿಮಾಡುತ್ತದೆ.

ಪ್ರಾಣಿಹತ್ಯೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಅಪೇಕ್ಷೆಪಡುವ ಸಸ್ಯಾಹಾರಿಗಳು ತಾವೇ ಸಂಶಯ ಸುಳುವಿನಲ್ಲಿ ಸಿಕ್ಕಿದ್ದಾರೆ.

ದೇವಾಲಯಗಳಲ್ಲಿ ಪ್ರಾಣಿವಧೆಯಾಗುತ್ತಿರುವುದು ಬಹಳ ಜಾಗ್ರತೆ ಕಮ್ಮಿಯಾಗುತ್ತಿದೆ. ಅದೇ ಸಮಯದಲ್ಲಿ ಆಹಾರಕ್ಕಾಗಿ ಆಗುತ್ತಿರುವ ಪ್ರಾಣಿಗಳ ಹತ್ಯೆ ಹೆಚ್ಚುತ್ತಿದೆ.

ಮನು ಹೇಳಿದ್ದಾನೆ—

ನಮಾಂಸಭಕ್ಷಣೇದೋಷೋನಮದ್ಯೇನಚಮೈಥುನೇ ।
ಪ್ರವೃತ್ತಿರೇಷಾಂಭೂತಾನಾಂನಿವೃತ್ತಿಸ್ತುಮಹಾಫಲಾಃ ॥

ಮತ್ತು

ಲೋಕೇವ್ಯಯಾಮಿಷಮದ್ಯಸೇವಾ
ನಿತ್ಯಾಸ್ತುದಂತೋನಾಹಿತತ್ರಬೋಧನಾ ।
ವ್ಯವಸ್ಥಿತಿಸ್ತಾಸುವಿವಾಹಯಜ್ಞ
ಸುರಾಗ್ರಹೈರಾಸುನಿವೃತ್ತಿರಿಷ್ಟಾ ।

ಆದರೆ ಜನರು ದೇವರಿಗೆ ಸಮರ್ಪಿಸದೆ ಮಾಂಸವನ್ನು ತೆಗೆದುಗೊಳ್ಳದಂತೆ ನಿಷೇಧಿಸಿದೆ. ಈ ರೀತಿಯಾಗಿ ಧಾರ್ಮಿಕ ರೀತ್ಯಾ ಮಾಂಸಾಹಾರವನ್ನು ನಿಲ್ಲಿಸಿದೆ.

ಮಹಾತ್ಮರಾದ ಶ್ರೀ ರಾಮಕೃಷ್ಣರ ಚಟುವಟಿಕೆಗಳ ಕೇಂದ್ರವಾದ ಕಾಳೀ ದೇವಾಲಯದಲ್ಲಿ ಈಗಲೂ ಆಡುಗಳನ್ನು ಬಲಿಕೊಡುತ್ತಾರೆ. ಶ್ರೀ ರಾಮಕೃಷ್ಣರು ಯಾವಾಗಲೂ ಅದಕ್ಕೆ ಸೇರಲಿಲ್ಲ, ಅಥವಾ ಅದನ್ನು ನಿಷೇಧಿಸಲೂ ಇಲ್ಲ. ಸ್ವಾಮಿ ವಿವೇಕಾನಂದರು ಹೊರದೇಶದಿಂದ ಬಂದಮೇಲೆ ಹೊಸದಾಗಿ ಕಟ್ಟಿದ್ದ ಬೇಲೂರು ರಾಮಕೃಷ್ಣ ಮಠದಲ್ಲಿ ತಾವೇ ಸ್ವತಃ ದುರ್ಗಾ ಪೂಜೆಯನ್ನು ಆರಂಭಿಸಿದರು. ಪೂಜೆ ಮಾಡಲು ಶ್ರೀ ಸಾರದಾ ಮಾತೆಯವರ ಅಪ್ಪಣೆ ಕೇಳಿದರು, ಮತ್ತು ಪ್ರಾಣಿಗಳನ್ನು ಬಲಿಕೆಪಡಬಹುದೇ ಎಂದು ಕೇಳಿದರು ಸಾರದಾ ಮಾತೆಯವರು ದುರ್ಗಾಪೂಜೆಗೆ ಅಪ್ಪಣೆ ಕೊಡುವಾಗ ಪ್ರಾಣಿಗಳ ಬಲಿ ಕೊಡಲು ಒಪ್ಪಲಿಲ್ಲ. [ಟ್ರೂತ್]

ವುಡ್‌ಲ್ಯಾಂಡ್ಸ್ 25-7-69 ರಿಂದ
ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆ
ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4